ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ : ಸಿ5(1)ಹೊ.ತಾ.ಸಿ/37/2017-18 ದಿನಾಂಕ : 12-08-2021

ಇವರಿಗೆ,
ಬೆಂಗಳೂರು ಆಯುಕ್ತಾಲಯದ
ಎಲ್ಲಾ ಜಿಲ್ಲಾ ಉಪನಿರ್ದೇಶಕರು,

ಮಾನ್ಯರೆ,

ವಿಷಯ: ಹೊಸ ತಾಲ್ಲೂಕುಗಳು ರಚನೆಯಾಗಿರುವ ಹಿನ್ನೆಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ ಇಡಿ 13 ಎಂಪಿಎಸ್ 2017 ದಿನಾಂಕ: 23/06/2021.
2. ಉಪನಿರ್ದೇಶಕರು ಯೋಜನೆ ರವರ ಟಿಪ್ಪಣಿ ಯೋ6/12 ಹೊ.ಕ.ತಾ.ಕ್ಷೇ.ಶಿ.ಕ.ನಿ/2019-20 ದಿನಾಂಕ: 07/08/2021.

******

ಉಲ್ಲೇಖ-1ರ ಸರ್ಕಾರದ ಹೊಸ ಕಂದಾಯ ತಾಲ್ಲೂಕು ರಚನೆ ಹಿನ್ನೆಲೆಯಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಸಿಬ್ಬಂದಿ ಒದಗಿಸಲು ರಾಜ್ಯದಲ್ಲಿ ಕೋವಿಡ್-19ರ ಹಿನ್ನೆಲೆಯಲ್ಲಿ ಆರ್ಥಿಕ ಸಂಪನ್ಮೂಲದ ಕೊರತೆ ಇರುವುದರಿಂದ ಹೊಸ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯನ್ನು ಪ್ರಾರಂಭಿಸುವ ಹಾಗೂ ಅಗತ್ಯ ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಗೆ ಅನುದಾನ ಒದಗಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದಕಾರಣ ಪ್ರಸ್ತುತ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ತಾತ್ಕಾಲಿಕವಾಗಿ ಕಛೇರಿಯನ್ನು ಪ್ರಾರಂಭಿಸುವ ಅವಕಾಶಗಳ ಬಗ್ಗೆ ಪರಿಶೀಲಿಸ ಬೇಕಾಗಿರುವುದರಿಂದ ಈ ಕೆಳಕಂಡ ಅಂಶದ ಬಗ್ಗೆ ಮಾಹಿತಿಯನ್ನು ಒದಗಿಸಲು ಉಲ್ಲೇಖ2ರ ಟಿಪ್ಪಣಿಯಲ್ಲಿ ಕೋರಲಾಗಿದ್ದು ಈ ಬಗ್ಗೆ ಕೂಡಲೇ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ತಿಳಿಸಿದೆ.

**ಹೊಸದಾಗಿ ಪ್ರಾರಂಭಿಸಬೇಕಾದ ಕಛೇರಿಗೆ ಬೇರ್ಪಡಿಸಬೇಕಾದ ಕಛೇರಿಗಳಿಂದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸಮ ಪ್ರಮಾಣದಲ್ಲಿ ವಿಂಗಡಿಸಿ ಹೊಸ ಕಛೇರಿಗಳಿಗೆ ಹುದ್ದೆ ಸಮೇತ ಸ್ಥಳಾಂತರಿಸುವ ಕುರಿತು.**

ಈ ಮೇಲ್ಕಂಡ ಅಂಶದ ಬಗ್ಗೆ ಪರಿಶೀಲಿಸಿ ಮೂಲ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಮಂಜೂರಾದ ಸಿಬ್ಬಂದಿ ವಿನ್ಯಾಸ (Staff Pattern) ಹುದ್ದೆವಾರು ಮತ್ತು ಅದರಲ್ಲಿ ಸಮ ಪ್ರಮಾಣದಲ್ಲಿ ವಿಂಗಡಿಸಿ ಹೊಸ ಕಛೇರಿಗೆ ಹುದ್ದೆ ಸಮೇತ ಸ್ಥಳಾಂತರಿಸಬಹುದಾದ ಹುದ್ದೆಗಳ ಮಾಹಿತಿಯನ್ನು ಈ ಪತ್ರಕ್ಕೆ ಲಗತ್ತಿಸಿದ ನಮೂನೆಯಲ್ಲಿ ಪ್ರತಿ ಕಛೇರಿಗೆ ಸಂಬಂದಿಸಿದಂತೆ ಪ್ರತ್ಯೇಕವಾಗಿ (ಒಂದು ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ಹೊಸದಾಗಿ ಕ್ಷೇತ್ರಶಿಕ್ಷಣಾಧಿಕಾರಿಗಳ ಕಚೇರಿ ಮಂಜೂರಾಗಿದ್ದಲ್ಲಿ )ಕೂಡಲೇ ಸಲ್ಲಿಸುವುದು.

ತಮ್ಮ ನಂಬುಗೆಯ,

ಡಾ॥ ರೂಪಶ್ರೀ.ಎಸ್. ಕ.ಆ.ಸೇ
ಜಂಟಿ ನಿರ್ದೇಶಕರು (ಆಡಳಿತ)

ಪ್ರತಿಯನ್ನು ಉಪನಿರ್ದೇಶಕರು (ಯೋಜನೆ) ಆಯುಕ್ತರ ಕಛೇರಿ ರವರಿಗೆ ಮಾಹತಿಗಾಗಿ

e:\c5(1) new\new_posts\new_taluks.docx

# ನಮೂನೆ

| ಬೇರ್ಪಡಿಸಬೇಕಾದ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ವಿವರ | | | | ಹೊಸ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ವಿವರ | |
|---|---|---|---|---|---|
| ಮೂಲ ಕಛೇರಿ ವಿಳಾಸ: | | | | ಹೊಸ ಕಛೇರಿ ವಿಳಾಸ: | |
| ಕ್ರಸಂ | ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳ ಸಂಖ್ಯೆ | ಸಮ ಪ್ರಮಾಣದ ವಿಭಜನೆ (3/2) | ಹುದ್ದೆಯ ಪದನಾಮ | ಸ್ಥಳಾಂತರಿಸ ಬಹುದಾದ ಹುದ್ದೆಗಳ ಸಂಖ್ಯೆ |
| 1 | 2 | 3 | 4 | 5 | 6 |
| 1 | ಪತ್ರಾಂಕಿತ ವ್ಯವಸ್ಥಾಪಕರು | | | ಪತ್ರಾಂಕಿತ ವ್ಯವಸ್ಥಾಪಕರು | |
| 2 | ಅಧೀಕ್ಷಕರು | | | ಅಧೀಕ್ಷಕರು | |
| 3 | ಪ್ರಥಮ ದರ್ಜೆ ಸಹಾಯಕರು | | | ಪ್ರಥಮ ದರ್ಜೆ ಸಹಾಯಕರು | |
| 4 | ದ್ವಿತೀಯ ದರ್ಜೆ ಸಹಾಯಕರು | | | ದ್ವಿತೀಯ ದರ್ಜೆ ಸಹಾಯಕರು | |
| 5 | ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರು | | | ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರು | |
| 6 | ಬೆರಳಚ್ಚುಗಾರರು | | | ಬೆರಳಚ್ಚುಗಾರರು | |
| 7 | ವಾಹನ ಚಾಲಕರು | | | ವಾಹನ ಚಾಲಕರು | |
| 8 | ಗ್ರೂಪ್ –ಡಿ ನೌಕರರು | | | ಗ್ರೂಪ್ –ಡಿ ನೌಕರರು | |
| 9 | ಇತರೆ | | | | |

ಉಪನಿರ್ದೇಶಕರು (ಆಡಳಿತ)

e:\c5(1) new\new_posts\new_taluks.docx